# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವಿದ್ಯುತ್ ಮಗ್ಗಗಳ ಘಟಕಕ್ಕೆ ಅಕೋಸ್ಟಿಕ್ ಉಪಕರಣಗಳ ಅಳವಡಿಕೆಗಾಗಿ ಸಾಮಾನ್ಯ ವರ್ಗದವರಿಗೆ ಶೇಕಡ 75 ರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಶೇಕಡ 90 ರಷ್ಟು ಸಹಾಯಧನ ಒದಗಿಸುವ ಬಗ್ಗೆ.

---

**ಓದಲಾಗಿದೆ:-**

ಜವಳಿ ಅಭಿವೃದ್ಧಿ ಆಯುಕ್ತರು ಮತ್ತು ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಇವರ ಪತ್ರ ಸಂಖ್ಯೆ: ಕೈಜಇ/ಜವಳಿ/ಜಪ್ರಅ/ಅಕೋಸ್ಟಿಕ್/2019-20, ದಿನಾಂಕ: 20.03.2019.

**ಪ್ರಸ್ತಾವನೆ:**

ಕರ್ನಾಟಕ ವಿಧಾನ ಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಮಿತಿಯ 3ನೇ ವರದಿಯಲ್ಲಿ ವಿದ್ಯುತ್ ಮಗ್ಗಗಳಿಂದಾಗುವ ಶಬ್ದ ಮಾಲಿನ್ಯವನ್ನು ತಡೆಗಟ್ಟಲು ಕ್ರಮವಹಿಸುವಂತೆ ಶಿಫಾರಸ್ಸು ಮಾಡಿತ್ತು. ಸದರಿ ಶಿಫಾರಸ್ಸಿನ ಅನ್ವಯ 2019-20ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಸರ್ಕಾರವು ಕಂಡಿಕೆ-286ರಲ್ಲಿ ಈ ಕೆಳಕಂಡಂತೆ ಘೋಷಿಸಿರುತ್ತದೆ:-

"ವಿದ್ಯುತ್ ಮಗ್ಗಗಳಿಂದ ಶಬ್ದ ಮಾಲಿನ್ಯವಾಗುತ್ತಿರುವುದನ್ನು ನಿಯಂತ್ರಿಸಲು ವಿದ್ಯುತ್ ಮಗ್ಗಗಳ ಘಟಕಕ್ಕೆ ಅಕೋಸ್ಟಿಕ್ ಉಪಕರಣಗಳ ಅಳವಡಿಕೆಗಾಗಿ ಶೇಕಡ 75ರಷ್ಟು ಸಹಾಯಧನ ನೀಡಲಾಗುವುದು. ಈ ಉದ್ದೇಶಕ್ಕಾಗಿ 2019-20ನೇ ಸಾಲಿನಲ್ಲಿ 5 ಕೋಟಿ ರೂ.ಗಳನ್ನು ಒದಗಿಸಿದೆ".

"A subsidy of 75% will be provided to electric loom units to implement acoustic equipment to reduce sound pollution. For this purpose, Rs.5 crore is provided in the year 2019-20".

2019-20ನೇ ಸಾಲಿನ ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯ ಲೆಕ್ಕ ಶೀರ್ಷಿಕೆ "2851-00-103-0-62-106 (ಸಹಾಯಧನ)" ಅಡಿಯಲ್ಲಿ ಒಟ್ಟು ಅನುದಾನ ರೂ.11700.00 ಲಕ್ಷಗಳ ಹಂಚಿಕೆಯಾಗಿರುತ್ತದೆ. ಈ ಮೇಲೆ ಘೋಷಿಸಲಾದ ಹೊಸ ಯೋಜನೆಗೆ ರೂ.500.00 ಲಕ್ಷಗಳು ನಿಗದಿಯಾಗಿದ್ದು, ಇದರಲ್ಲಿ ಸಾಮಾನ್ಯ ಲೆಕ್ಕ ಶೀರ್ಷಿಕೆ "2851-00-103-0-62-106 (ಸಹಾಯಧನ)" ಅಡಿ ರೂ.375.00 ಲಕ್ಷಗಳು, ವಿಶೇಷ ಘಟಕ ಯೋಜನೆ ಲೆಕ್ಕ ಶೀರ್ಷಿಕೆ "2851-00-103-0-62-422" ಅಡಿ ರೂ.90.00 ಲಕ್ಷಗಳು ಹಾಗೂ ಗಿರಿಜನ ಉಪಯೋಜನೆಯ ಲೆಕ್ಕ ಶೀರ್ಷಿಕೆ "2851-00-103-0-62-422" ಅಡಿ ರೂ. 35.00 ಲಕ್ಷಗಳು ಹೀಗೆ ಒಟ್ಟು ರೂ.500.00 ಲಕ್ಷಗಳನ್ನು ನಿಗದಿಪಡಿಸಲಾಗಿದೆ.

ನಿಗದಿಪಡಿಸಲಾದ ರೂ.500.00 ಲಕ್ಷಗಳ ಅನುದಾನದಿಂದ ವಿದ್ಯುತ್ ಮಗ್ಗಗಳ ಘಟಕಕ್ಕೆ ಅಕೋಸ್ಟಿಕ್ ಉಪಕರಣಗಳ ಅಳವಡಿಕೆಗಾಗಿ ಸಾಮಾನ್ಯ ವರ್ಗದವರಿಗೆ ಶೇಕಡ 75 ರಷ್ಟು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಶೇಕಡ 90 ರಷ್ಟು ಸಹಾಯಧನ ನೀಡಲು ಉದ್ದೇಶಿಸಲಾಗಿದೆ.

....2

ಮೇಲೆ ಓದಲಾದ ಜವಳಿ ಅಭಿವೃದ್ಧಿ ಆಯುಕ್ತರು ಮತ್ತು ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ. ಇವರ ಪತ್ರದಲ್ಲಿ, ವಿದ್ಯುತ್ ಮಗ್ಗ ಘಟಕಗಳು ಹಿಂದಿನಿಂದಲೂ ವಸತಿ ವ ಕಾರ್ಯಗಾರ ರೂಪದಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಸದರಿ ಘಟಕಗಳು ವಸತಿ ಪ್ರದೇಶಗಳಲ್ಲಿ ಸ್ಥಾಪಿಸಲಾಗಿದ್ದು, ಈ ಘಟಕಗಳಿಂದ ಹೆಚ್ಚಿನ ಶಬ್ದ ಮಾಲಿನ್ಯ ಉಂಟಾಗುತ್ತಿದೆ. ಇದರಿಂದಾಗಿ ಜನಸಾಮಾನ್ಯರು ಈ ವಿದ್ಯುತ್ ಮಗ್ಗಗಳ ವಿರುದ್ಧ ಸ್ಥಳೀಯ ಪ್ರಾಧಿಕಾರಗಳಿಗೆ ದೂರನ್ನು ಸಲ್ಲಿಸುತ್ತಿರುವುದರಿಂದ, ಸ್ಥಳೀಯ ಪ್ರಾಧಿಕಾರಗಳು ಮಗ್ಗಗಳನ್ನು ನಡೆಸಲು ನೀಡಿರುವ ಪರವಾನಗಿಯನ್ನು ರದ್ದುಗೊಳಿಸುತ್ತಿರುವುದಲ್ಲದೇ ಹೊಸ ಘಟಕಗಳಿಗೆ ಪರವಾನಗಿಯನ್ನು ಸಹ ನೀಡಿರುತ್ತಿರುವುದಿಲ್ಲ. ಇದರಿಂದಾಗಿ ವಿದ್ಯುತ್ ಮಗ್ಗ ನಡೆಸುತ್ತಿರುವ ನೇಕಾರರಿಗೆ ಅನಾನುಕೂಲವಾಗಿರುತ್ತದೆ.

ಈ ನೇಕಾರರ ಸಮಸ್ಯೆಗಳನ್ನು ಪರಿಹರಿಸಲು, ನೇಕಾರರು ಪ್ರಸ್ತುತ ವಾಸವಾಗಿರುವ ಪ್ರದೇಶಗಳಲ್ಲಿನ ವಿದ್ಯುತ್ ಮಗ್ಗ ಘಟಕಗಳಿಂದ ಉಂಟಾಗುವ ಶಬ್ದ ಮಾಲಿನ್ಯವನ್ನು ನಿಯಂತ್ರಣ ಮಾಡುವ ಬಗ್ಗೆ ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸ್, ಬೆಂಗಳೂರು, ರವರು ಸಂಶೋಧನೆ ನಡೆಸಿದ್ದು, ವಿದ್ಯುತ್ ಮಗ್ಗ ಘಟಕಕ್ಕೆ ಅಕೋಸ್ಟಿಕ್ ಕಿಟಕಿ, ಬಾಗಿಲು ಹಾಗೂ ಇನ್ನಿತರ ಉಪಕರಣಗಳನ್ನು ಅಳವಡಿಸಿದಲ್ಲಿ ವಿದ್ಯುತ್ ಮಗ್ಗ ಘಟಕಗಳಿಂದ ಹೊರಡುವ ಶಬ್ದವು ಕಡಿಮೆಯಾಗುತ್ತದೆಯೆಂದು ಹಾಗೂ 4 ವಿದ್ಯುತ್ ಮಗ್ಗಗಳಿರುವ ಕಟ್ಟಡಕ್ಕೆ ಶಬ್ದ ಮಾಲಿನ್ಯ ನಿಯಂತ್ರಣ ಉಪಕರಣಗಳನ್ನು ಅಳವಡಿಸಲು ರೂ.2.00 ಲಕ್ಷಗಳು ವೆಚ್ಚವಾಗಲಿದೆಯೆಂದು ವರದಿಯನ್ನು ನೀಡಿರುತ್ತಾರೆ.

ಈ ಸಂಬಂಧ ಜವಳಿ ಅಭಿವೃದ್ಧಿ ಆಯುಕ್ತರು ಮತ್ತು ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಇವರು ಈ ಕೆಳಕಂಡಂತೆ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ:-

| ಕ್ರ. ಸಂ. | ವಿವರ | ಗರಿಷ್ಠ ಘಟಕ ವೆಚ್ಚ (ರೂ. ಲಕ್ಷಗಳಲ್ಲಿ) | ಸಾಮಾನ್ಯ ಫಲಾನುಭವಿಗಳಿಗೆ ಶೇಕಡ 75 ರಷ್ಟು ಸಹಾಯಧನ (ರೂ. ಲಕ್ಷಗಳಲ್ಲಿ) | ಪ.ಜಾ / ಪ.ಪಂ ಫಲಾನುಭವಿಗಳಿಗೆ ಶೇಕಡ 90 ರಷ್ಟು ಸಹಾಯಧನ (ರೂ. ಲಕ್ಷಗಳಲ್ಲಿ) |
|---|---|---|---|---|
| 1 | ಅಕೋಸ್ಟಿಕ್ ಕಿಟಕಿ, ಬಾಗಿಲು ಹಾಗೂ ಇನ್ನಿತರ ಉಪಕರಣಗಳು | 2.00 | 1.50 | 1.80 |

ಜವಳಿ ಅಭಿವೃದ್ಧಿ ಆಯುಕ್ತರು ಮತ್ತು ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ ಇವರ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ವಾಕೈ 02 JAKY 2019 ಬೆಂಗಳೂರು, ದಿನಾಂಕ: 31.07.2019.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ವಿದ್ಯುತ್ ಮಗ್ಗಗಳಿಂದ ಶಬ್ದ ಮಾಲಿನ್ಯವಾಗುತ್ತಿರುವುದನ್ನು ನಿಯಂತ್ರಿಸಲು ವಿದ್ಯುತ್ ಮಗ್ಗಗಳ ಘಟಕಕ್ಕೆ ಅಕೋಸ್ಟಿಕ್ ಉಪಕರಣಗಳ ಅಳವಡಿಕೆಗಾಗಿ ಸಾಮಾನ್ಯ ವರ್ಗದವರಿಗೆ ಶೇಕಡ 75ರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಶೇ.90ರಷ್ಟು ಸಹಾಯಧನವನ್ನು ಈ ಕೆಳಕಂಡಂತೆ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

| ಕ್ರ. ಸಂ. | ವಿವರ | ಗರಿಷ್ಟ ಘಟಕ ವೆಚ್ಚ (ರೂ. ಲಕ್ಷಗಳಲ್ಲಿ) | ಸಾಮಾನ್ಯ ಫಲಾನುಭವಿಗಳಿಗೆ ಶೇಕಡ 75 ರಷ್ಟು ಸಹಾಯಧನ (ರೂ. ಲಕ್ಷಗಳಲ್ಲಿ) | ಪ.ಜಾ / ಪ.ಪಂ ಫಲಾನುಭವಿಗಳಿಗೆ ಶೇಕಡ 90 ರಷ್ಟು ಸಹಾಯಧನ (ರೂ. ಲಕ್ಷಗಳಲ್ಲಿ) |
|---|---|---|---|---|
| 1 | ಅಕೋಸ್ಟಿಕ್ ಕಿಟಕಿ, ಬಾಗಿಲು ಹಾಗೂ ಇನ್ನಿತರ ಉಪಕರಣಗಳು | 2.00 | 1.50 | 1.80 |

2. ಸದರಿ ಯೋಜನೆಯನ್ನು ಅನುಬಂಧದಲ್ಲಿ ಲಗತ್ತಿಸಿರುವ ಮಾರ್ಗಸೂಚಿಯಂತೆ ಅನುಷ್ಠಾನಗೊಳಿಸತಕ್ಕದ್ದು.

3. ಸಾಮಾನ್ಯ ವರ್ಗದವರಿಗೆ ಮತ್ತು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಆಯವ್ಯಯದಲ್ಲಿ ಒದಗಿಸಲಾದ ಅನುದಾನದ ಮಿತಿಯೊಳಗೆ ಈ ಯೋಜನೆಯನ್ನು ಅನುಷ್ಠಾನಗೊಳಿಸತಕ್ಕದ್ದು ಹಾಗೂ ಮುಂದೆ ಯಾವುದೇ ಕಾರಣಕ್ಕೂ ಈ ಯೋಜನೆಗೆ ಹೆಚ್ಚುವರಿ ಅನುದಾನದ ಬೇಡಿಕೆಯನ್ನು ಸಲ್ಲಿಸತಕ್ಕದ್ದಲ್ಲ.

4. ಈ ಯೋಜನೆಯ ವೆಚ್ಚ ರೂ.500.00 ಲಕ್ಷ (ಐದು ನೂರು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು 2019-20ನೇ ಸಾಲಿನ ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯ ಲೆಕ್ಕ ಶೀರ್ಷಿಕೆ **"2851-00-103-0-62-106"** ಅಡಿಯಲ್ಲಿ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ ಆಇ 58 ವೆಚ್ಚ-1/2019 ದಿನಾಂಕ: 22-07-2019 ಮತ್ತು ಯೋಜನಾ ಇಲಾಖೆಯು ಟಿಪ್ಪಣಿ ಸಂಖ್ಯೆ ಪಿಡಿಎಸ್ 2 ಪಿಎಫ್ಆರ್ 2019 - ಪಿಡಿಎಸ್‌ಡಿ ದಿನಾಂಕ: 17.05.2019ರಲ್ಲಿ ನೀಡಿದ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಕೆ. ಉಮಾಪತಿ)** 31/7/19
ಸರ್ಕಾರದ ಉಪ ಕಾರ್ಯದರ್ಶಿ (ಜವಳಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಗೆ:-

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು – ಈ ಆದೇಶವನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿ, ಪ್ರಕಟಿತ 25 ಪ್ರತಿಗಳನ್ನು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಜವಳಿ), ವಿಕಾಸಸೌಧ, ಬೆಂಗಳೂರು, ಇಲ್ಲಿಗೆ ಕಳುಹಿಸಲು ಕೋರಿದೆ.

ಪ್ರತಿಯನ್ನು:-

1. ಮಹಾಲೇಖಪಾಲರು (ಲೆಕ್ಕಪತ್ರ : ಲೆಕ್ಕ ಪರಿಶೋಧನೆ), ಕರ್ನಾಟಕ, ಬೆಂಗಳೂರು.
2. [illegible] ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ

3. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಯೋಜನ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
5. ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, "ಶುಭೋದಯ ಕಾಂಪ್ಲೆಕ್ಸ್" ನಂ. 86, ರೈಲ್ವೆ ಪ್ಯಾರಲಲ್ ರಸ್ತೆ, ಕುಮಾರ್ ಪಾರ್ಕ್ ಪಶ್ಚಿಮ, ಬೆಂಗಳೂರು-560 020.
6. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-1), ವಿಧಾನ ಸೌಧ, ಬೆಂಗಳೂರು.
7. ನಿರ್ದೇಶಕರು / ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
8. ಶಾಖಾ ರಕ್ಷಾ ಕಡತ : ಹೆಚ್ಚುವರಿ ಪ್ರತಿ.

ಸರ್ಕಾರಿ ಆದೇಶ ಸಂಖ್ಯೆ: ವಾಕೈ 02 JAKY 2019, ದಿನಾಂಕ: 31.07.2019ಕ್ಕೆ ಸಂಬಂಧಿಸಿದ ಅನುಬಂಧ

ಯೋಜನೆಯ ಮಾರ್ಗಸೂಚಿ

## I. ಫಲಾನುಭವಿಗಳ ಅರ್ಹತೆ:-

1. ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
2. ಫಲಾನುಭವಿಯು ಸ್ವಂತ /ಲೀಸ್/ ಬಾಡಿಗೆ ವಿದ್ಯುತ್ ಮಗ್ಗ ಘಟಕ ಹೊಂದಿರಬೇಕು.
3. ಘಟಕದಲ್ಲಿ ಕನಿಷ್ಠ 02 ವಿದ್ಯುತ್ ಮಗ್ಗ ಇರತಕ್ಕದ್ದು.
4. ವಿದ್ಯುತ್ ಮಗ್ಗ ಚಟುವಟಿಕೆಗಳಲ್ಲಿ ತೊಡಗಿರುವ ಗ್ರಾಮೀಣ ಮತ್ತು ನಗರ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ನೇಕಾರ ಫಲಾನುಭವಿಗಳು.

## II. ಹಣಕಾಸಿನ ನೆರವು

1. ಘಟಕ ವೆಚ್ಚ – ಪ್ರತಿ ಘಟಕಕ್ಕೆ ಗರಿಷ್ಠ ರೂ.2,00,000/- ಗಳು.
2. ಘಟಕದಲ್ಲಿ ಅಕೋಸ್ಟಿಕ್ ಉಪಕರಣವನ್ನು ಅಳವಡಿಸಲು ಅವಶ್ಯವಿರುವ ಮೊತ್ತವನ್ನು ಬ್ಯಾಂಕ್ / ಹಣಕಾಸು ಸಂಸ್ಥೆಯಿಂದ ಸಾಲ ಪಡೆದು ಅನುಷ್ಠಾನಗೊಳಸಬೇಕು.
3. ಅನುಷ್ಠಾನದ ನಂತರ ಸರ್ಕಾರದ ಸಹಾಯಧನಕ್ಕೆ ಪ್ರಸ್ತಾವನೆ ಸಲ್ಲಿಸುವುದು.
4. ಸರ್ಕಾರದ ಗರಿಷ್ಟ ಸಹಾಯಧನ ಶೇ. 75 ರಂತೆ ಸಾಮಾನ್ಯ ಫಲಾನುಭವಿಗಳಿಗೆ ಗರಿಷ್ಠ ರೂ.1,50,000/- ಗಳನ್ನು ನೀಡಲಾಗುವುದು (Backend Subsidy).
5. ಸರ್ಕಾರದ ಗರಿಷ್ಟ ಸಹಾಯಧನ ಶೇ.90 ರಂತೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಗರಿಷ್ಠ ರೂ.1,80,000/- ಗಳನ್ನು ನೀಡಲಾಗುವುದು (Backend Subsidy).
6. ನಿಗದಿಯಾದ ಘಟಕ ವೆಚ್ಚಕ್ಕಿಂತ ಹೆಚ್ಚುವರಿಯಾಗಿ ಅವಶ್ಯವಿರುವ ಮೊತ್ತವನ್ನು ನೇಕಾರ ಫಲಾನುಭವಿಯು ಸಾಲದ ರೂಪದಲ್ಲಿ ಪಡೆದು ಅನುಷ್ಠಾನಗೊಳಸತಕ್ಕದ್ದು.

## III. ಫಲಾನುಭವಿಗಳಿಂದ ಪಡೆಯಬೇಕಾದ ದಾಖಲಾತಿಗಳು

1. ಸಾಮಾನ್ಯ ಅರ್ಜಿ ನಮೂನೆಯಲ್ಲಿ ಫಲಾನುಭವಿಯ ಮಾಹಿತಿ.
2. ಇತ್ತೀಚಿನ ಭಾವಚಿತ್ರ.
3. ವಿದ್ಯುತ್‌ಮಗ್ಗ ಘಟಕದ ದಾಖಲಾತಿ.
4. ಬ್ಯಾಂಕ್ / ಹಣಕಾಸಿನ ಸಂಸ್ಥೆಗಳಿಂದ ಸಾಲ ಬಿಡುಗಡೆ ಪತ್ರ.

## IV. ಅನುಷ್ಠಾನ

1. ಈ ಯೋಜನೆಯನ್ನು ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮದ ವತಿಯಿಂದ ಅನುಷ್ಠಾನಗೊಳಿಸುವುದು.

2. ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಮಟ್ಟದ ಉಪ ನಿರ್ದೇಶಕರು / ಸಹಾಯಕ ನಿರ್ದೇಶಕರು, ಅಸಂಘಟಿತ ವಲಯದ ಫಲಾನುಭವಿಗಳನ್ನು ನಿಯಮಾನುಸಾರ ಆಯ್ಕೆ ಮಾಡಿ ಫಲಾನುಭವಿಗಳ ಅವಶ್ಯಕತೆಗೆ ತಕ್ಕಂತೆ ಬ್ಯಾಂಕಿನಿಂದ ಸಾಲ ಪಡೆದು ಅನುಷ್ಠಾನಗೊಳಿಸಿ ವಿಭಾಗ/ವಲಯ ಮಟ್ಟದ ಜಂಟಿ ನಿರ್ದೇಶಕರುಗಳ ಮೂಲಕ ಸರ್ಕಾರದ ಸಹಾಯಧನಕ್ಕೆ ಪ್ರಸ್ತಾವನೆಗಳನ್ನು ಮಂಜೂರಾತಿಗಾಗಿ ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮಕ್ಕೆ ಸಲ್ಲಿಸುವುದು.

(ಕೆ. ಉಮಾಪತಿ)
ಸರ್ಕಾರದ ಉಪ ಕಾರ್ಯದರ್ಶಿ (ಜವಳಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.